ಧರ್ಮಕೀರ್ತಿರಾಜ್ ನಟನೆಯ ಅಮರಾವತಿ ಪೊಲೀಸ್ ಸ್ಟೇಷನ್



ಸೆಸ್ಪೆನ್ಸ್, ಥ್ರಿಲ್ಲರ್ ಅಂಶಗಳನ್ನು ಒಳಗೊಂಡಿರುವ 'ಅಮರಾವತಿ ಪೋಲೀಸ್ ಸ್ಟೇಷನ್' ಚಿತ್ರದ ಟ್ರೈಲರ್ ಬಿಡುಗಡೆ ಸಮಾರಂಭವು ಇತ್ತೀಚೆಗೆ ನಡೆಯಿತು.

ಕೆಎಫ್‌ಸಿಸಿ ಮಾಜಿ ಅಧ್ಯಕ್ಷ ಮತ್ತು ಹಿರಿಯ ಪ್ರಚಾರಕರ್ತ ನಾಗೇಂದ್ರ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಪುನೀತ್‌ಅರಸಿಕೆರೆ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದರೆ. ಪಿ.ಪಿ.ಪವರ್ ಪಿಕ್ಚರ್ಸ್ ಲಾಂಛನದಲ್ಲಿ ಕೆ.ಆರ್.ಪ್ರದೀಪ್ ಕಮಲಪುರ ನಿರ್ಮಾಣ, ಗೀತಾ ಅಂಜನರೆಡ್ಡಿ ಸಹ ನಿರ್ಮಾಪಕಿಯಾಗಿ ಗುರುತಿಸಿಕೊಂಡಿದ್ದಾರೆ.

ಕಾಲ್ಪನಿಕ ಕತೆಯಲ್ಲಿ ಕಾಣೆಯಾಗುವ ಊರಿನಗೌಡ, ಆತನನ್ನು ಪತ್ತೆಹಚ್ಚಲು ಬಂದ ಪೋಲೀಸ್ ಅಧಿಕಾರಿ ಕೂಡ ಕಾಣೆಯಾಗುತ್ತಾನೆ. ಇದೆಲ್ಲಾದರ ಹಿಂದಿನ ಮರ್ಮ ಏನು ಎಂಬುದನ್ನು ಕುತೂಹಲಕಾರಿಯಾಗಿ ತೋರಿಸಿದ್ದು, ಜತೆಗೆ ಒಂದಷ್ಟು ನಾಗಾ ಸಾಧುಗಳ ಕಂಟೆಂಟ್ ಇರಲಿದೆ. ಅದು ಏನು ಎಂಬುದನ್ನು ಚಿತ್ರ ನೋಡಬೇಕಂತೆ ಅಂತ ಕಂಡವು ಹೇಳಿಕೊಂಡಿದೆ.

ಧರ್ಮಕೀರ್ತಿರಾಜ್ ನಾಯಕ, ವೇದ್ವಿಕ ನಾಯಕಿ. ಉಳಿದಂತೆ ಭವ್ಯ, ಧರ್ಮ, ಸಾಧುಕೀಕಿಲ, ಕಾಕ್ರೋಚ್ ಸುಧಿ, ನಾಗೇಂದ್ರಪ್ರಸಾದ್, ಧರ್ಮಣ್ಣ ಕಡೂರು ಮುಂತಾದವರು ನಟಿಸಿದ್ದಾರೆ. ನಾಲ್ಕು ಹಾಡುಗಳಿಗೆ ರೋಣದ ಬಕ್ಕೇಶ್ ಸಂಗೀತ ಸಂಯೋಜಿಸಿದ್ದಾರೆ. ಗೌತಮ್ ಮಟ್ಟ ಛಾಯಾಗ್ರಹಣ, ಡಿಫರೆಂಟ್ ಡ್ಯಾನಿ-ಅಲ್ಟಿಮೇಟ್ ಶಿವು ಸಾಹಸ, ವೆಂಕಿ ಯುಡಿವಿ ಸಂಕಲನವಿದೆ. ಸಂಭಾಷಣೆಗೆ ಆರ್ಯಶಿವು ಕರಗುಂದ ಪೆನ್ನು ಕೆಲಸ ಮಾಡಿದೆ. ಅರಸಿಕೆರೆ, ಮಂಗಳೂರು, ಬೆಂಗಳೂರು ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದೆ.



'ಈ ಜನರೇಶನ್ ಮಕ್ಕಳು' ಆಲ್ಬಂ ಹಾಡು

ಇಂದಿನ ಮಕ್ಕಳು ಮುಂದಿನ ಪ್ರಜೆಗಳು ಎಂದು ಹಿರಿಯರು ಹೇಳಿದ್ದಾರೆ. ಅದೇ ರೀತಿ ಇಂದು ಮಕ್ಕಳು ಯಾವ ರೀತಿ ಇರುತ್ತಾರೆ ಎಂದು ಸಾರುವ 'ಈ ಜನರೇಶನ್ ಮಕ್ಕಳು ನಾವು, ಫುಲ್ ಬ್ಯುಸಿ, ಫುಲ್ ಕ್ರೇಜಿ ಎಂಬ ಸಾಲಿನ ಮೂರು ನಿಮಿಷದ 'ಈ ಜನರೇಶನ್ ಮಕ್ಕಳು' ಆಲ್ಬಂ ಗೀತೆ ಮೊನ್ನೆಯಷ್ಟೇ ಬಿಡುಗಡೆಯಾಗಿದೆ. ಗ್ಲಿಟ್ಟರರ್ಸ್ ಸ್ಟಾರ್ ಹೌಸ್ ಪ್ರೊಡಕ್ಷನ್ಸ್ ಪ್ರಸ್ತುತಪಡಿಸಿ ನಿರ್ಮಿಸಿದೆ. ಮಕ್ಕಳ ದಿನಚರಿ, ಹವ್ಯಾಸ ಎಂಥದ್ದು, ಶಾಲೆಯಲ್ಲಿ ಸ್ನೇಹಿತರೊಂದಿಗಿನ ಒಡನಾಟ, ಅಪ್ಪ ಅಮ್ಮನೊಂದಿಗೆ ಯಾವ ರೀತಿ ಇರುತ್ತಾರೆ? ಎನ್ನುವ ಅಂಶಗಳನ್ನು ರೂಪಿಸುವ ಸಂಸ್ಥೆಯ ಪ್ರಯತ್ನದ ಮುಂದುವರೆದ ಭಾಗವಾಗಿ ಮೂಡಿಬಂದಿದೆ.

ಈ ಹಿಂದೆ 'ಗಗನ ಮಿಲನ' 'ಕಾಲ ಹಾರುತ್ತದೆ' ಮತ್ತು 'ಮನಮನ ಮಿಡಿದಿದೆ' ಎನ್ನುವ ಮೂರು ಆಲ್ಬಂ ಹಾಡುಗಳಿಗೆ ಜೀವನ್ ಹಳ್ಳಿಕಾರ್ ಸಾಹಿತ್ಯ, ನೃತ್ಯ ಸಂಯೋಜನೆ, ನಿರ್ದೇಶನ ಮಾಡುವ ಜತೆಗೆ ಮುಖ್ಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದರು. ಈಗ ಕ್ಯಾಮಾರ ಹಿಂದಿನ ಎಲ್ಲಾ ಜವಬ್ದಾರಿಗಳನ್ನು ತೆಗೆದುಕೊಂಡು ಚಣ್ಣರಿಂದಲೇ ಡ್ಯಾನ್ಸ್ ಮಾಡಿಸಿರುವುದು ವಿಶೇಷ. 4-5ನೇ ತರಗತಿಯಲ್ಲಿ ವ್ಯಾಸಾಂಗ ಮಾಡುತ್ತಿರುವ ಸಕ್ಷಂ ಮುಖ್ಯ ಭೂಮಿಕೆಯಲ್ಲಿ ಕಾಣಿಸಿಕೊಂಡಿದ್ದು, ಉಳಿದಂತೆ ಅಗನ, ಗಾನವಿ, ಜಾನವಿ, ಸಾನ್ವಿಕ, ನಿಧಿ, ರಿಯಾ, ಬಿಂದುಶ್ರೀ, ಸಂಪನ್ನ ಮತ್ತು ಸಕ್ಷಿತ್ ಗೀತೆಗೆ ಹೆಜ್ಜೆ ಹಾಕಿದ್ದಾರೆ.

ಸಿದ್ಧಾರ್ಥ್ ಕಾಮತ್ ಸಂಗೀತದಲ್ಲಿ ಪಂಚಮ್ ಜೀವ ಮತ್ತು ಸಾಕ್ಷಿ ಭಾಗವತ್ ಗೀತೆಗೆ ಧ್ವನಿಯಾಗಿದ್ದಾರೆ. ಛಾಯಾಗ್ರಹಣ ಅಯಾಂಕ್, ಸಂಕಲನ ಆಕಾಶ್.ಎಸ್.ಮಹೇಂದ್ರಕರ್, ಕಲರಿಸ್ಟ್ ಕಿಶೋರ್ ಅಕ್ಕನ್ನ ಅವರದಾಗಿದೆ. ಸಾಂಗ್‌ನ್ನು ಜೀವನ್ ಹಳ್ಳಿಕಾರ್ ಯೂಟ್ಯೂಬ್ ಚಾನೆಲ್‌ದಲ್ಲಿ ವೀಕ್ಷಿಸಬಹುದಾಗಿದೆ.



ಕಮಲಹಾಸನ್ ಹುಟ್ಟುಹಬ್ಬಕ್ಕೆ ಸಂಡಿಯಾರ್ ಚಾಲನೆ

ಕಮಲ್‌ಹಾಸನ್ ಹುಟ್ಟುಹಬ್ಬದಂದು 'ಸಂಡಿಯಾರ್' ಚಿತ್ರವು ಸೆಟ್ಟೇರಿದೆ. ಎಸ್.ಯು.ಅರುಣ್ ಕುಮಾರ್ ನಿರ್ದೇಶನದಲ್ಲಿ ಅಧಿಕೃತವಾಗಿ ಶುರುವಾಗಿದೆ. ಶೀರ್ಷಿಕೆ ಬಿಡುಗಡೆಯಾದ ಬೆನ್ನಲೇ ಅಭಿಮಾನಿಗಳು ಹಾಗೂ ಚಿತ್ರಪ್ರೇಮಿಗಳಲ್ಲಿ ಕುತೂಹಲ ಮೂಡಿಸಿದೆ. ಇದರ ಮುಂದುವರೆದ ಭಾಗವಾಗಿ ಕಮಲಹಾಸನ್ ಅವರ ವಿಭಿನ್ನ ಲುಕ್‌ಟೆಸ್ಟ್ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದೆ.

ಸಿನಿಮಾದ ಗುಣಮಟ್ಟ ಹಾಗೂ ಸೃಜನಶೀಲ ಬಲವನ್ನು ಮತ್ತಷ್ಟು ಹೆಚ್ಚಲು ದಕ್ಷಿಣ ಭಾರತದ ಪರಿಣಿತ ತಾಂತ್ರಿಕ ತಂಡವೊಂಡು ಒಂದಾಗಿದೆ. 'ಜೈಲರ್-2' ಖ್ಯಾತಿಯ ಅನಿರುದ್ ರವಿಚಂದ್ರನ್ ಸಂಗೀತದ ಜವಬ್ದಾರಿಯನ್ನು ಹೊತ್ತುಕೊಂಡಿದ್ದಾರೆ ಕೆ.ಎಸ್.ಸುನಿಲ್ ಛಾಯಾಗ್ರಹಣ, ಸಿ.ಎಸ್.ಬಾಲಚಂದ್ರ್ ಪ್ರೊಡಕ್ಷನ್ ಡಿಸೈನರ್, ಅಮ್ಮತಾರಾಮ್ ವಸ್ತ್ರ ವಿನ್ಯಾಸಕಿ ಆಗಿರುತ್ತಾರೆ

ರಾಜ್‌ಕಮಲ್ ಫಿಲ್ಮ್ ಇಂಟರ್‌ನ್ಯಾಷನಲ್ ಹಾಗೂ ಟರ್ಮರಿಕ್ ಮೀಡಿಯಾ ಬ್ಯಾನರ್‌ಗಳ ಅಡಿಯಲ್ಲಿ ಜಂಟಿಯಾಗಿ ಚಿತ್ರವು ನಿರ್ಮಾವಾಗುತ್ತಿದೆ. ಉಳಿದತೆ ತಾರಾಗಣ ಮತ್ತು ಹೆಚುವರಿ ತಾಂತ್ರಿಕ ವರ್ಗದ ಸಂಪೂರ್ಣ ವಿವರಗಳನ್ನು ಶೀಘ್ರದಲ್ಲಿಯೇ ತಂಡವು ತಿಳಿಸಲಿದೆಯಂತೆ.

'ಬಾರ್'ನಲ್ಲಿ ಕಮಾಲ್ ಮಾಡಲು ಕೋಮಲ್ ರೆಡಿ

'ಸಂಗೀತ ಬಾರ್ ಅಂಡ್ ರೆಸ್ಟೋರೆಂಟ್' ಚಿತ್ರಕ್ಕೆ ಸಂದೇಶ್‌ಶೆಟ್ಟಿ ಅಜ್ರಿ ನಿರ್ದೇಶನ, ವಿಕಾಸ್ ಶೆಟ್ಟಿ ನಿರ್ಮಾಣ ಮಾಡಿದ್ದಾರೆ. ಪ್ರಚಾರದ ಸಲುವಾಗಿ '60 ಎಂ.ಎಲ್' ಹೆಸರಿನಲ್ಲಿ ಟೀಸರ್‌ನ್ನು ಜಗ್ಗೇಶ್ ಬಿಡುಗಡೆ ಮಾಡಿ ತಮ್ಮನ



ಸಿನಿಮಾಕ್ಕೆ ಶುಭ ಹಾರೈಸಿದ್ದಾರೆ. ನಾಯಕ ಕೋಮಲ್‌ಕುಮಾರ್ ಆಸ್ಥಾನವೊಂದರ ವರ್ಣಚಿತ್ರ ಕಲಾವಿದನಾಗಿ, ನಟ ಮೇಘನರಾಜ್ ರಾಣಿಯಾಗಿ ಕಾಣಿಸಿಕೊಂಡಿದ್ದಾರೆ. ಇನ್ನು ಹಿಂದೂ-ಮುಸ್ಲಿಂ ಧಾರ್ಮಿಕ ವಿಷಯಗಳು ಕೂಡ ಇದರಲ್ಲಿ ಕಂಡುಬಂದಿದೆ.

ನಿರ್ದೇಶಕ ಸಂದೇಶ್‌ಶೆಟ್ಟಿ ಅಜ್ರಿ ಹೇಳುವಂತೆ, ಮೊದಲಾರ್ಧ ಬಾರ್‌ನಲ್ಲಿ ಶುರುವಾಗಿ, ದ್ವಿತಿಯಾರ್ಧ ದೇವರ ತಾಣದಲ್ಲಿ ಪ್ರಾರಂಭಗೊಂಡು ಅಲ್ಲಿಯೇ ಮುಗಿಯುತ್ತದೆ. ಸಂಗೀತ ಬಾರ್ ಅಂಡ್ ರೆಸ್ಟೋರೆಂಟ್ ಮತ್ತು ದೇವರ ತಾಣ ಹೆಸರುಗಳು ನಮ್ಮ ಚಿತ್ರದ ಶೀರ್ಷಿಕೆಯಾಗಿದೆ. ಆದರೆ ಸೆನ್ಸಾರ್ ನಿಯಮದಂತೆ ಒಂದೇ ಹೆಸರು ಇಡಬೇಕಾಗಿರುವುದರಿಂದ ಸಂಗೀತ ಬಾರ್ ಅಂಡ್ ರೆಸ್ಟೋರೆಂಟ್‌ನ್ನು ಉಳಿಸಿಕೊಳ್ಳಲಾಗಿದೆ ಎಂಬುದಾಗಿ ಮಾಹಿತಿ ನೀಡುತ್ತಾರೆ.

ಕೋಮಲ್‌ಕುಮಾರ್ ಎರಡು ಪಾತ್ರಗಳಲ್ಲಿ ಕಾಣಿಸಿಕೊಂಡಿರುವುದು ವಿಶೇಷ. ಉಳಿದಂತೆ ಅನುಷಾರೈ, ಪ್ರಮೋದ್‌ಶೆಟ್ಟಿ, ಪ್ರಕಾಶ್ ತುಮ್ಮಿನಾಡು, ವಜ್ರಧೀರ್‌ಜೈನ್, ಉತ್ಸವ್, ಕಾರ್ತಿಕ್‌ರಾವ್, ರಾಘುರಮನಕೊಪ್ಪ, ಎಂ.ಕೆ.ಮಠ ಹಾಗೂ ನಿರ್ದೇಶಕರು ಒಂದು ಪಾತ್ರಕ್ಕೆ ಬಣ್ಣ ಹಚ್ಚಿದ್ದಾರೆ. ಸಿನಿಮಾಕ್ಕಾಗಿಯೇ ಕುಂದಾಪುರದ ಅಂಪಾರಿನ ವಾಲ್ತೂರು ಗ್ರಾಮ, ಎರಡು ಎಕರೆ ಜಾಗದಲ್ಲಿ ಏಳು ವಿಭಿನ್ನ ವಿನ್ಯಾಸದ ಬೃಹತ್ ಸೆಟ್‌ಗಳನ್ನು ನಿರ್ಮಿಸಿ, ಅಲ್ಲಿಯೇ ಬಹುತೇಕ ಶೇಕಡ 90ರಷ್ಟು ಚಿತ್ರೀಕರಣ ಉಳಿದಂತೆ ಶಿವಮೊಗ್ಗ, ತೀರ್ಥಹಳ್ಳಿ ಸೇರಿದಂತೆ ಕರಾವಳಿ ಮಲೆನಾಡು ಭಾಗದಲ್ಲಿ ಶೂಟ್ ಮಾಡಲಾಗಿದೆ.

'ಲಾರ್ಡ್ ಗಾಗ' ಮೋಷನ್ ಪೋಸ್ಟರ್ ಬಿಡುಗಡೆ

ಒಂದಷ್ಟು ಮಂದಿ ಸ್ಯಾಂಡಲ್‌ವುಡ್ ಸಿನಿಪ್ರಿಯರ ಗಮನ ಸೆಳೆದಿದ್ದ 'ಲಾರ್ಡ್ ಗಾಗ' ಚಿತ್ರದ ಟೈಟಲ್ ಪೋಸ್ಟರ್ ಮತ್ತು ಮೋಷನ್ ಪೋಸ್ಟರ್ ಹೊರಬಂದು ಸದ್ದು ಮಾಡಿತ್ತು. ಈಗ ಟೀಸರ್ ಬಿಡುಗಡೆ ಮಾಡಿ ಒಂದಷ್ಟು ವಿಷಯಗಳನ್ನು ಹಂಚಿಕೊಂಡಿದೆ. ಗ್ರ್ಯಾವಿಟಿ ಫಿಲಂಸ್ ಬ್ಯಾನರ್‌ನಲ್ಲಿ ಉದ್ಯಮಿ ಮುಕಿ ರೆಫುನಾಥನ್ ನಿರ್ಮಾಣ ಮಾಡುವ ಜತೆಗೆ ಒಂದು ಪಾತ್ರಕ್ಕೆ ಬಣ್ಣ ಚ್ಚಿದ್ದಾರೆ. ವೈಕೆ ಕಥೆ,ಚಿತ್ರಕತೆ ಬರೆದು ಆಕ್ಷನ್ ಕಟ್ ಹೇಳಿದ್ದಾರೆ. ಶೂನ್ಯ ನಾಯಕ, ಸ್ವರೂಪಿಣಿ ಮತ್ತು ದಿಶಾ ನಾಯಕಿಯರು.

ಹೆಸರೇ ಹೇಳುವಂತೆ, ಚಿತ್ರವು ಔಟ್ ಅಂಡ್ ಔಟ್ ಇಂಡಿಯನ್ ಕಲ್ಟ್ ಅಂಶಗಳನ್ನು ಒಳಗೊಂಡಿದೆ. ಮನುಷ್ಯನ ಮನಸ್ತಿನಲ್ಲಿ ಮೂಡುವ ಪ್ರೀತಿ, ಪ್ರೇಮ, ಪ್ರಣಯ, ಭಾವನೆ, ವ್ಯಸನ, ಆಯ್ಕೆ ಎಲ್ಲದರ ಚಿತ್ರಣವನ್ನು ರೊಮ್ಯಾಂಟಿಕ್ ಸೈಕಲಾಜಿಕಲ್ ಥ್ರಿಲ್ಲರ್ ಶೈಲಿಯಲ್ಲಿ ತೆರೆ ಮೇಲೆ ತೋರಿಸುವ ಪ್ರಯತ್ನ, ಕಾಲತೀತ, ಇಗೋ ಸಂಟ್ರಿಕ್ ಆಗಿರುವಂತಹ ಸನ್ನಿವೇಶಗಳು, ಹಿಮ್ಮುಖ ನಿರೂಪಣೆಯಲ್ಲಿ ಸಾಗುತ್ತದೆ.

ನಿರ್ಮಾಪಕ ಮುಕಿ ರೆಫುನಾಥನ್ ಹೇಳುವಂತೆ, ಕಾರ್ಪೋರೇಟ್ ಶೈಲಿಯಲ್ಲಿ ಕಲಾವಿದರು, ತಂತ್ರಜ್ಞರಿಗೆ ಸಂಭಾವನೆ ಅಲ್ಲದೆ ವಿಮೆ, ಗುಣಮಟ್ಟದ ಸಾವಯವ ಆಹಾರ, ವಸತಿ, ಆರೋಗ್ಯ ಎಲ್ಲಾ ಸೇವೆಗಳನ್ನು ನೀಡಲಿದ್ದೇವೆ. ಈಗಾಗಲೇ ಮೂರು ಸಾವಿರಕ್ಕೂ ಬೇರೆ ಬೇರೆ ವರ್ಗದ ನೋಡುಗರಿಗೆ ಚಿತ್ರವನ್ನು ತೋರಿಸಲಾಗಿ, ಅವರುಗಳ ಅನಿಸಿಕೆ, ಅಭಿಪ್ರಾಯ, ಸಲಹೆ ಪಡೆದುಕೊಂಡು ಅದರಂತೆ ಅಂತಿಮ ರೂಪ ಪಡೆದುಕೊಂಡಿದೆ ಎಂಬುದು ಅವರ ನುಡಿ.

ಉಡುಪಿ, ಗೋಕರ್ಣ, ಹಾಸನ ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದೆ. ಸದ್ಯದಲ್ಲೇ ಸೆನ್ಸಾರ್ ಅಂಗಳಕ್ಕೆ ಹೋಗಲಿದ್ದು, ಎಲ್ಲವು ಅಂದುಕೊಂಡಂತೆ ಆದರೆ, ಚಿತ್ರವನ್ನು ಕನ್ನಡ ಅಲ್ಲದೆ ತಮಿಳು, ತೆಲುಗು, ಮಲಯಾಳಂ, ಹಿಂದಿ, ಬೆಂಗಾಲಿ, ಭೋಜಪುರಿ ಹೀಗೆ ಏಳಕ್ಕೂ ಹೆಚ್ಚು ಭಾಷೆಗಳಲ್ಲಿ ಮುಂದಿನ ವರ್ಷ ಮಾರ್ಚ್ ವೇಳೆಗೆ ತೋರಿಸಲು ತಂಡವು ಯೋಜನೆ ರೂಪಿಸಿಕೊಂಡಿದೆ.



Editor, Publisher & Owned by Aruna, Place of Publication: #29, 3rd Main Road Rustarquanapura Mysore Road, Bengaluru 560026, Printer: Krishnaiah V